# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಿಬಿಎಂಪಿ ವ್ಯಾಪ್ತಿಯ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ನಿಗಧಿಪಡಿಸಿರುವ ರೂ.208.00 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾಡಿರುವ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022.
3. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (21).
4. ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಪತ್ರ ಸಂಖ್ಯೆ: ಮುಆ/ಪಿಆರ್(G)/659/2022-23, ದಿನಾಂಕ: 24-05-2022.

*****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಬೆಂಗಳೂರು ನಗರದಲ್ಲಿ ಬಿಬಿಎಂಪಿ ಮೂಲಕ ಮುಖ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ರೂ.6000.00 ಕೋಟಿಗಳನ್ನು ಒದಗಿಸಲಾಗುವುದು ಎಂದು ಘೋಷಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ: 14-01-2022ರ ಆದೇಶದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂದರ್ಭದಲ್ಲಿ ಘೋಷಿಸಿದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ರೂ.6000.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ: (3) ರಲ್ಲಿ ಓದಲಾದ ದಿನಾಂಕ: 25-02-2022 (21) ರ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022 ರಂತೆ ಅನುಮೋದಿಸಲಾಗಿರುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸಂಬಂಧಿಸಿದಂತೆ ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರಕ್ಕೆ ರೂ.208.00 ಕೋಟಿಗಳ ಅನುದಾನವನ್ನು ನಿಗಧಿಗೊಳಿಸಿ ಆದೇಶಿಸಲಾಗಿರುತ್ತದೆ.

. . .2/-

ಮೇಲೆ ಕ್ರಮ ಸಂಖ್ಯೆ: (4) ರಲ್ಲಿ ಓದಲಾದ ದಿನಾಂಕ: 24-05-2022 ರ ಪತ್ರದಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿ ರವರು, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂದರ್ಭದಲ್ಲಿ ಘೋಷಿಸಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು "ಅಮೃತ ನಗರೋತ್ಥಾನ ಯೋಜನೆ" ಅಡಿಯಲ್ಲಿ ರೂ.6000.00 ಕೋಟಿಗಳನ್ನು ಒದಗಿಸಲಾಗುವುದೆಂದು ಘೋಷಿಸಿರುತ್ತಾರೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್ ವೈ 2021, ದಿನಾಂಕ: 25-02-2022 (21) ರಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಕ್ಕೆ ರೂ.208.00 ಕೋಟಿಗಳ ಅನುದಾನ ನಿಗಧಿಗೊಳಿಸಿ ಆದೇಶಿಸಲಾಗಿದೆ.

ಅದರಂತೆ ಸರ್ಕಾರವು ನಿಗಧಿಪಡಿಸಿರುವ ಅನುದಾನದಡಿಯಲ್ಲಿ ರಸ್ತೆ ಅಭಿವೃದ್ಧಿ, ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ, ಕಟ್ಟಡಗಳ ಅಭಿವೃದ್ಧಿ, ಬೀದಿ ದೀಪಗಳ ನಿರ್ವಹಣೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕೈಗೊಳ್ಳಲು ಕ್ರಿಯಾಯೋಜನೆಯನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ಮಾನ್ಯ ವಿಧಾನಸಭಾ ಶಾಸಕರ ಕೋರಿಕೆಗಳನ್ನು ಪರಿಗಣಿಸಿ, ಕ್ರಿಯಾಯೋಜನೆಯನ್ನು ಅಂತಿಮಗೊಳಿಸುವಂತೆ ಸೂಚಿಸಲಾಗಿರುತ್ತದೆ.

ಆದುದರಿಂದ, ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರ ರವರು ಸೂಚಿಸಿರುವ ಹಾಗೂ ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಕ್ಕೆ ಮೀಸಲಿಟ್ಟಿರುವ ರೂ.208.00 ಕೋಟಿಗಳ ಅನುದಾನದಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ತಯಾರಿಸಿರುವ ಕ್ರಿಯಾಯೋಜನೆಗೆ ಅನುಮೋದನೆ ನೀಡುವಂತೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕೋರಿರುತ್ತಾರೆ.

ಬಿಬಿಎಂಪಿ ಮುಖ್ಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 292 ಎಂಎನ್‌ವೈ 2022 (ಇ),**
**ಬೆಂಗಳೂರು, ದಿನಾಂಕ: 07-06-2022.**

ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (21) ರಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರಕ್ಕೆ ರೂ.208.00 ಕೋಟಿಗಳ ಅನುದಾನವನ್ನು ನಿಗದಿಗೊಳಿಸಿ ಆದೇಶಿಸಿದ್ದು, ಬಿಬಿಎಂಪಿ ಮುಖ್ಯ ಆಯುಕ್ತರ ಪ್ರಸ್ತಾವನೆಯಂತೆ, ಸದರಿ ರೂ.208.00 ಕೋಟಿಗಳ ಅಂದಾಜು ಮೊತ್ತದ ಈ ಕೆಳಕಂಡ ಕಾಮಗಾರಿಗಳ ಕ್ರಿಯಾಯೋಜನೆ ಪಟ್ಟಿಗೆ ಈ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

. . .3/-

| ಕ್ರ. ಸಂ | ಕಾಮಗಾರಿಯ ವಿವರ | ಕಾಮಗಾರಿಯ ಮೊತ್ತ (ರೂ. ಲಕ್ಷಗಳಲ್ಲಿ |
|---|---|---|
| **Buildings** | | |
| 1 | Development of Subhash Play Ground at Ideal Homes in ward No 160.RR Nagara | 500.00 |
| 2 | Providing Gallery to Musical Fountain in JP Park in Ward No 17, Jp Park. | 700.00 |
| **Roads, Drains and Footpaths** | | |
| 3 | Improvements of Roads in Pramod layout, Reddy layout, Veerbadranagara and surrounding areas in Rajarajeshwari nagara Ward no 160 | 400.00 |
| 4 | Improvements of Roads in D'Souza Nagar, Pushpagiri Nagar, Muneshwara Nagar and surrounding areas in Rajarajeshwari nagara Ward no 160 | 250.00 |
| 5 | Improvements of Roads in Krishnappa layout 1st Block, Bangarappanagar old village and surrounding areas in Rajarajeshwari nagara Ward no 160 | 350.00 |
| 6 | Improvements of Roads in Giridham layout and surrounding areas in Rajarajeshwari nagara Ward no 160 | 200.00 |
| 7 | Improvements of Roads in GuruDhatta, TATA Promoters and surrounding areas in Rajarajeshwari nagara Ward no 160 | 300.00 |
| 8 | Improvements of Roads in Ideal home 1st phase & 2nd Phase, BEML 5th Stage and surrounding areas in Rajarajeshwari nagara Ward no 160 | 1000.00 |
| 9 | Improvements of Roads in Javaregowdana Doddi, village and surrounding areas in Rajarajeshwari nagara Ward no 160 | 300.00 |
| 10 | Improvements of Roads in Darshan Farm, Manjusha Sports Club and surrounding areas in Rajarajeshwari nagara Ward no 160 | 100.00 |
| 11 | Improvements of Roads in Ideal home Township, Kenchanahalli and surrounding areas in Rajarajeshwari nagara Ward no 160 | 1000.00 |
| 12 | Improvements of Roads in Kenchanahalli Rajarajeshwari temple and surrounding areas in Rajarajeshwari nagara Ward no 160 | 300.00 |

. . .4/-

| | | |
|---|---|---|
| 13 | Improvements of Roads in Halage vaderahalli, Shivanna Layout, Durga Parameshwari Temple and surrounding areas in Rajarajeshwari nagara Ward no 160 | 500.00 |
| 14 | Improvements of Roads in Rajajeshwari Nagar Jnanakshi Park Surrounding LE Green Lake view Apartment and surrounding areas in Rajarajeshwari nagara Ward no 160 | 200.00 |
| 15 | Improvements of Roads in Manipal hospital surrounding and surrounding areas in Rajarajeshwari nagara Ward no | 400.00 |
| 16 | Improvements of Roads in Sachidananda Nagar and surrounding areas in Rajarajeshwari nagara Ward no 160 | 300.00 |
| 17 | Improvements of Roads in Baldwin School, Crazy Park surrounding areas in Rajarajeshwari nagara Ward no 160 | 300.00 |
| 18 | Improvements of Roads in BEML layout 10th Stage and surrounding areas in Rajarajeshwari nagara Ward no 160 | 400.00 |
| 19 | Improvements of Roads in Dwaraka West, Dwaraka East, Krishna Residency, Channsandra Colony, RNS back side and surrounding areas in Rajarajeshwari nagara Ward no 160 | 700.00 |
| 20 | Improvements of CC Roads & Drains in Pantarapalya and surrounding areas in Rajarajeshwari nagara Ward no 160 | 300.00 |
| 21 | Improvements of CC Roads & Drains in Pramod layout, Reddy layout, Veerbadranagara and surrounding areas in Rajarajeshwari nagara Ward no 160 | 250.00 |
| 22 | Improvements of CC Roads & Drains in D'Souza Nagar, Pushpagiri Nagar, Muneshwara Nagar and surrounding areas in Rajarajeshwari nagara Ward no 160 | 100.00 |
| 23 | Improvements of CC Roads & Drains in Krishnappa layout 1st Block, Bangarappanagar old village and surrounding areas in Rajarajeshwari nagara Ward no 160 | 100.00 |
| 24 | Improvements of CC Roads & Drains in Giridham layout and surrounding areas in Rajarajeshwari nagara Ward no 160 | 100.00 |
| 25 | Improvements of CC Roads & Drains in GuruDhatta, TATA Promoters and surrounding areas in Rajarajeshwari nagara Ward no 160 | 100.00 |
| 26 | Improvements of CC Roads & Drains in Ideal home 1st phase & 2nd Phase BEML 5th Stage and surrounding areas in Rajarajeshwari nagara Ward no 160 | 200.00 |

. . .5/-

| | | |
|---|---|---|
| 27 | Improvements of CC Roads & Drains in Javaregowdana Doddi, village and surrounding areas in Rajarajeshwari nagara Ward no 160 | 100.00 |
| 28 | Improvements of CC Roads & Drains in Darshan Farm Manjusha Sports Club and surrounding areas in Rajarajeshwari nagara Ward no 160 | 75.00 |
| 29 | Improvements of CC Roads & Drains in Ideal home Township Kenchanahalli and surrounding areas in Rajarajeshwari nagara Ward no 160 | 200.00 |
| 30 | Improvements of CC Roads & Drains in Kenchanahalli Rajarajeshwari temple and surrounding areas in Rajarajeshwari nagara Ward no 160 | 150.00 |
| 31 | Improvements of CC Roads & Drains in Halagevaderahalli, Shivanna Layout, Durga Parameshwari Temple and surrounding areas in Rajarajeshwari nagara Ward no 160 | 200.00 |
| 32 | Improvements of CC Roads & Drains in Rajajeshwari Nagar Jnanakshi Park Surrounding LE Green Lake view Apartment and surrounding areas in Rajarajeshwari nagara Ward no 160 | 100.00 |
| 33 | Improvements of CC Roads & Drains in Manipal hospital surrounding and surrounding areas in Rajarajeshwari nagara Ward no 160 | 175.00 |
| 34 | Improvements of CC Roads & Drains in Sachidananda Nagar and surrounding areas in Rajarajeshwari nagara | 250.00 |
| 35 | Improvements of CC Roads & Drains in Baldwin School Crazy Park surrounding areas in Rajarajeshwari nagara | 150.00 |
| 36 | Improvements of CC Roads & Drains in BEML layout 10th Stage and surrounding areas in Rajarajeshwari nagara Ward no 160 | 150.00 |
| 37 | Improvements of CC Roads & Drains in Dwaraka West, Dwaraka East, Krishna Residency, Channsandra Colony RNS back side and surrounding areas in Rajarajeshwari nagara Ward no 160 | 300.00 |
| 38 | Improvements of Roads & Drains in Prem Nagara Chowdeshwari Nagar and surrounding areas in Ward no 73, Kottigepalya | 300.00 |
| 39 | Improvements of Roads & Drains in Kottigepalya Village and surrounding areas in Ward no 73, Kottigepalya | 300.00 |

. . .6/-

| | | |
|---|---|---|
| 40 | Improvements of CC Roads, Drains & Culverts in LG Ramanna Layout and surrounding areas in Ward no 69, Laggere | 500.00 |
| 41 | Improvements of CC Roads, Drains & Culverts in Freedom Fighter Colony, Narasimha Swamy Layout and surrounding areas in Ward no 69, Laggere | 500.00 |
| 42 | Improvements of CC Roads, Drains & Culverts in Lavakusha Nagara and surrounding areas in Ward no 69, Laggere | 500.00 |
| 43 | Improvements of CC Roads, Drains & Culverts in Muneshwara Nagara and surrounding areas in Ward no 69, Laggere | 500.00 |
| 44 | Comprehensive Development of Roads, Drains, Footpaths, Buildings and Parks in RR Nagar Constituency | 1400.00 |
| 45 | Improvements of Drains & Culverts in JP Park and surrounding areas in Ward no 17, JP Park | 500.00 |
| 46 | Improvements of Drains & Culverts in Yashawanthapura and surrounding areas in Ward no 37, Yashawanthapura. | 300.00 |
| 47 | Improvements of Drains & Culverts in Jalahalli and surrounding areas in Ward no16, Jalahalli. | 300.00 |
| 48 | Improvements of CC Roads & Drains in Goraguntepalya and surrounding areas in Ward no 38, Goraguntepalya. | 600.00 |
| 49 | Comprehensive Development of Roads and Drains in RR Nagar Constituency | 600.00 |
| 50 | Improvements of Roads and Drains in Papareddypalya, Annapoorneshwari Nagara and Surrounding areas in Ward no -129 Jnana bharathi. | 500.00 |
| 51 | Improvements of Roads and Drains in Kebbehalla, Channappa Layout and surrounding areas in Ward no - | 500.00 |
| 52 | Improvements of Roads and Drains in Mallathahalli, NGEF layout and Surrounding areas in Ward no -129 Jnana bharathi. | 500.00 |
| 53 | Improvements of Roads and Drains in Kengunte, KK layout, MPM Layout and Surrounding areas in Ward no -129 Jnana bharathi. | 500.00 |
| | **Borewell and Water Supply Works** | |
| 54 | Drilling of BoreWells and Providing Water Supply in Kebbehalla, kengunte, Mallathahalli and surrounding areas in Ward no -129 Jnana bharathi. | 500.00 |

. . .7/-

| | | |
|---|---|---|
| 55 | Drilling of Bore Wells, Providing Water Supply and Construction of RO Plants in Rajarajeshwari nagara Constituency | 800.00 |
| | **Total in Lakhs** | **20800.00** |

**ಷರತ್ತುಗಳು:**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಮತ್ತು ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ರೂ.208.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದು, ಅನುವು ಮಾಡಿರುವ ರೂ.208.00 ಕೋಟಿಗಳಿಗೆ ಮೀರಿದ ಯಾವುದೇ ವೆಚ್ಚ ಮತ್ತು ಟೆಂಡರ್ ಪ್ರೀಮಿಯಂಗಾಗಿ ಮಾಡುವ ವೆಚ್ಚವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು. ಟೆಂಡರ್ ಪ್ರೀಮಿಯಂ ಮೊತ್ತವನ್ನು ಅಂದಾಜಿನಲ್ಲಿ ಅನುವು ಮಾಡತಕ್ಕದ್ದಲ್ಲ.

2. ಸದರಿ ಕಾಮಗಾರಿಗಳನ್ನು ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್ ಗಳನ್ನು ಮಾಡಿ, ಪ್ಯಾಕೇಜ್ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000 ಹಾಗೂ e-procurement ಮುಖಾಂತರ ಕೈಗೊಂಡು, ಟೆಂಡರ್ ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್.ಎಫ್.ಸಿ 2016, ಬೆಂಗಳೂರು, ದಿನಾಂಕ: 14-06-2016 ಮತ್ತು 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸುವುದು. ಯಾವುದೇ ಕಾಮಗಾರಿಗಳನ್ನು ವಿಭಜಿಸತಕ್ಕದ್ದಲ್ಲ.

3. ಈ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿರುವ ಕಾಮಗಾರಿಗಳು ಇತರೆ ಯಾವುದೇ ಯೋಜನೆ / ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಪೂರ್ವಾನ್ವಯವಾಗಿ ಖಚಿತ ಪಡಿಸಿಕೊಂಡು ಟೆಂಡರ್ ಆಹ್ವಾನಿಸತಕ್ಕದ್ದು.

4. ಅನುಮೋದಿತ ಕ್ರಿಯಾಯೋಜನೆಯಲ್ಲಿ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳನ್ನು ಅಳವಡಿಸಿಕೊಂಡು ಟೆಂಡರ್ ಕರೆದು ಅನುಷ್ಠಾನಗೊಳಿಸುವುದು ಬಿಬಿಎಂಪಿಯ ಮುಖ್ಯ ಆಯುಕ್ತರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಬಿಬಿಎಂಪಿಯ ಮುಖ್ಯ ಆಯುಕ್ತರು ತಮ್ಮ ಹಂತದಲ್ಲಿ ಕ್ರಿಯಾ ಯೋಜನೆಯ ಕಾಮಗಾರಿಗಳನ್ನು ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳಾಗಿ ವಿಂಗಡಿಸಿ ಆದೇಶ ಹೊರಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.

. . .8/-

5. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿಬಿಎಂಪಿಯ ಪ್ರಧಾನ ಅಭಿಯಂತರರು ಹಾಗೂ ಸಂಬಂಧಪಟ್ಟ ಮುಖ್ಯ ಅಭಿಯಂತರರುಗಳು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟುನಿಟ್ಟಿನ ಕ್ರಮ ವಹಿಸತಕ್ಕದ್ದು.

6. ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

7. ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಮುಖ್ಯ ಆಯುಕ್ತರು, ಬಿಬಿಎಂಪಿ ರವರು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ಸರ್ಕಾರಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.

8. ಸರ್ಕಾರವು ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಬದಲಾವಣೆ ಮಾಡ ತಕ್ಕದ್ದಲ್ಲ. ಯಾವುದಾದರೂ ಅನುಮೋದಿತ ಕಾಮಗಾರಿಯ ಅಗತ್ಯವಿಲ್ಲವೆಂದು ಆ ನಂತರದಲ್ಲಿ ತಿಳಿದುಬಂದಲ್ಲಿ ಸಂಬಂಧಪಟ್ಟ ಅಂದಾಜು ಮೊತ್ತವನ್ನು ಉಳಿತಾಯವೆಂದು ಪರಿಗಣಿಸತಕ್ಕದ್ದು.

9. ಕರ್ನಾಟಕ ಆರ್ಥಿಕ ಸಂಹಿತೆ-1958, ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳನುಸಾರ ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಲಕ್ಷ್ಮೀಸಾಗರ್ ಎನ್.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಆಪ್ತ ಕಾರ್ಯದರ್ಶಿ, ಬೆಂಗಳೂರು.

6. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.